# ಕರ್ನಾಟಕ ಸರ್ಕಾರ

## ನಗರ ಭೂ ಸಾರಿಗೆ ನಿರ್ದೇಶನಾಲಯ

## ನಗರಾಭಿವೃದ್ಧಿ ಇಲಾಖೆ

ಸಂಖ್ಯೆ: ನಭೂಸಾ/315/ಆಡಳಿತ/2011-12

ಬಿಎಂಟಿಸಿ, ಟಿಟಿಎಂಸಿ, 'ಬಿ' 'ಬ್ಲಾಕ್
ಬಸ್ ಸ್ಟಾಂಡ್ ಮೇಲ್ಭಾಗ
4ನೇ ಮಹಡಿ, ಕೆ.ಹೆಚ್ ರಸ್ತೆ,
ಶಾಂತಿನಗರ, ಬೆಂಗಳೂರು-560027

## ಅಧಿಸೂಚನೆ

ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 4 (1) (ಬಿ) ಯಲ್ಲಿ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿನ ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

**ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 4 (1) (ಬಿ) ರಡಿ ನಗರ ಭೂ ಸಾರಿಗೆ ನಿರ್ದೇಶನಾಲಯದ ವಿವಿಧ ಹಂತಗಳ ಸೂಚನಾ ಪಟ್ಟಿ**

**i. ನಗರ ಭೂ ಸಾರಿಗೆ ನಿರ್ದೇಶನಾಲಯ ಅಂಗರಚನೆ ಕಾರ್ಯಗಳು ಮತ್ತು ಕರ್ತವ್ಯಗಳು:**

ನಗರ ಭೂ ಸಾರಿಗೆ ನಿರ್ದೇಶನಾಲಯವು ಸರ್ಕಾರಿ ಆದೇಶ ಸಂಖ್ಯೆ ನಅಇ 134 ಬಿಎಂಆರ್ 2006 (1) ಬೆಂಗಳೂರು ದಿನಾಂಕ 08-03-2007 ರಂತೆ ರಾಷ್ಟ್ರೀಯ ನಗರ ಸಾರಿಗೆ ನೀತಿ ಮತ್ತು 11ನೇ ನಗರ ಸಾರಿಗ ನೀತಿ ಪದ್ಧತಿಯ ಕಾರ್ಯ ನೀತಿಯ ವರದಿಯನ್ವಯ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ನಗರ ಭೂ ಸಾರಿಗೆ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಈ ನಿರ್ದೇಶನಾಲಯವು ಜಾರಿಗೆ ಬಂದ ದಿನಾಂಕದಿಂದ ನಗರ ಸಾರಿಗೆಗೆ ಸಂಬಂಧಿಸಿದಂತೆ ಅನೇಕ ಪರಿಣಾಮಕಾರಿ ಕ್ರಮಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ನಗರ ಸಾರಿಗೆಯನ್ನು ಕ್ರಮಬದ್ಧವಾಗಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡುವ ಕಾರ್ಯವನ್ನು ನಿರ್ವಹಿಸುತ್ತಿದೆ.

ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಹಿರಿಯ ಶ್ರೇಣಿಯ ಭಾಆಸೇ, ಅಧಿಕಾರಿಯನ್ನು ಆಯುಕ್ತರಾಗಿ ನೇಮಿಸಲಾಗಿದೆ. ಆಯುಕ್ತರು, ನಗರ ಭೂ ಸಾರಿಗೆ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಸಮಗ್ರ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುತ್ತಾರೆ.

**ii. ನಗರ ಭೂ ಸಾರಿಗೆ ನಿರ್ದೇಶನಾಲಯದ ಅಂಗರಚನೆಯ ಸಂಘಟನಾ ಪಟ್ಟಿ ಈ ಮುಂದಿನ ಚಾರ್ಟ್ ನಲ್ಲಿ ತೋರಿಸಲಾಗಿದೆ.**

# ಸಂಘಟನಾ ಪಟ್ಟಿ

## ಆಯುಕ್ತರು ನಗರ ಭೂ ಸಾರಿಗೆ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ,

- ಜಂಟಿ ನಿರ್ದೇಶಕರು
  - ಆಡಳಿತಾಧಿಕಾರಿ
    - ಲೆಕ್ಕಾಧಿಕಾರಿ
    - ದಸ್ತಾವೇಜು ತಜ್ಞರು
- ಸಹಾಯಕ ಕಾರ್ಯಪಾಲಕ ಅಭಿಯಂತರರು
- ವಿಶೇಷಾಧಿಕಾರಿ
  - ಸಹಾಯಕ ನಿರ್ದೇಶಕರು
  - ಸಹಾಯಕ ನಿರ್ದೇಶಕರು
    - ಅಭಿಯಂತರರು (ಸಿವಿಲ್ & ಮೆಕ್ಯಾನಿಕಲ್ ಇನ್ಫ್ರಾಸ್ಟ್ರಕ್ಚರ್) (ನಿಯುಕ್ತಿ/ಗುತ್ತಿಗೆ)
    - ಸಾರ್ವಜನಿಕ ಸಾರಿಗೆ ತಜ್ಞರು ಆಕೃತಿದಾರರು (ಗುತ್ತಿಗೆ ಆಧಾರದಲ್ಲಿ)
    - ಸಾರಿಗೆ ಯೋಜನಾಕಾರರು (ಗುತ್ತಿಗೆ ಆಧಾರದಲ್ಲಿ)

1. ಶೀಘ್ರಲಿಪಿಗಾರರು- 1no.
2. ಪ್ರಥಮ ದರ್ಜೆ ಸಹಾಯಕರು – 1no.
3. ದ್ವಿತೀಯ ದರ್ಜೆ ಸಹಾಯಕರು - 1no.
4. ಬೆರಳಚ್ಚುಗಾರರು- 1no.
5. ಡಾಟಾ ಎಂಟ್ರಿ ಆಪರೇಟರ್- (OCB)
6. ಗ್ರೂಪ್- 'D'-

1. ಶೀಘ್ರಲಿಪಿಗಾರರು- 1no.
2. ಪ್ರಥಮ ದರ್ಜೆ ಸಹಾಯಕರು – 1no.
3. ದ್ವಿತೀಯ ದರ್ಜೆ ಸಹಾಯಕರು - 1no.
4. ಬೆರಳಚ್ಚುಗಾರರು- 1no.
5. ಡಾಟಾ ಎಂಟ್ರಿ ಆಪರೇಟರ್- (OCB)
6. ಗ್ರೂಪ್- 'D'-

OCB- Outsourcing/ Contract Basis

**iii.** **ನಗರ ಭೂ ಸಾರಿಗೆ ನಿರ್ದೇಶನಾಲಯ ನಿರ್ವಹಿಸುವ ಪ್ರಮುಖ ಕಾರ್ಯಗಳು ಈ ಕೆಳಕಂಡಂತಿವೆ**

a. ನಿರ್ದಿಷ್ಟಪಡಿಸಿದ ಸ್ಥಳದಲ್ಲಿನ ಸಂಚಾರ ಬೇಡಿಕೆಯನ್ನು ಸಮಗ್ರ ಸಂಚಾರ ಮತ್ತು ಸಾರಿಗೆ ವ್ಯವಸ್ಥೆಗಳ CTTS & ಇತರ ಅಧ್ಯಯನಗಳ ಮುಖಾಂತರ ನಿರ್ದಿಷ್ಟ ಅವಧಿಯಲ್ಲಿ ನಿರ್ಧಾರ ಮಾಡುವುದು.

b. ಬೇರೆ ಬೇರೆ ಕಾರಿಡಾರ್ ಗೆ ಬೇಕಾಗುವ ಸಾರ್ವಜನಿಕ ಸಂಚಾರದ ಮಟ್ಟವನ್ನು ನಿರ್ಧಾರ ಮಾಡುವುದು.

c. ಸಾರಿಗೆ ಮೂಲಭೂತ ಸೌಕರ್ಯವನ್ನು ಸೃಜನೆ ಮಾಡಲು ಬೇಕಾದ ಹೊಸ ಹೂಡಿಕೆಗಳನ್ನು ಹಾಗೂ ಇವುಗಳಿಗೆ ಬೇಕಾದ ಶಿಫಾರಸ್ಸುಗಳ ನಿರ್ಧಾರಣ ಮಾಡುವುದು.

d. ಖಾಸಗೀದಾರರಿಂದ [ಸಂಚಾರ ಸೇವೆಗಳನ್ನು ಒದಗಿಸುವ ರಾಜ್ಯ ಸರ್ಕಾರಿ ಸ್ವಾಮ್ಯದ ವ್ಯವಸ್ಥೆಯ ಹೊರತಾಗಿ] ಸಾರ್ವಜನಿಕ ಸಂಚಾರ ವ್ಯವಸ್ತೆಯನ್ನು ಪಡೆಯಲು ವ್ಯವಸ್ಥೆಯನ್ನು ರೂಪಿಸುವುದು ಮತ್ತು ಇದು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಉಸ್ತುವಾರಿ ಮಾಡುವುದು.

e. ಸಂಪೂರ್ಣ ಸಂಚಾರ ಜಾಲವನ್ನು ಅಭಿವೃದ್ಧಿಗೊಳಿಸಲು ಹೊಸ ನೀತಿ ಸಂಹಿತೆಯನ್ನು ರೂಪಿಸುವುದು.

f. Integrated ನೀತಿಗಳನ್ನು ಅಭಿವೃದ್ಧಿ ಪಡಿಸಲು ಮುನಿಸಿಪಲ್ ಸಂಸ್ಥೆಗಳೊಡನೆ ವ್ಯವಹರಿಸುವುದು.

**ನಗರ ಭೂ ಸಾರಿಗೆ ನಿರ್ದೇಶನಾಲಯದ ಇತರ ಕಾರ್ಯಕ್ರಮಗಳು:**

a. ನಗರ ಪ್ರದೇಶಗಳಲ್ಲಿ ರಸ್ತೆ ಜಾಲಗಳನ್ನು ಯೋಜಿಸುವುದು.

b. ನಗರ ಪ್ರದೇಶಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡಲು ತಾಂತ್ರಿಕ ಮಾಪಕಗಳನ್ನು ರಚಿಸುವುದು.

c. ಸೈಕಲ್ ಸವಾರರಿಗೆ ಮತ್ತು ಪಾದಚಾರಿಗಳಿಗೆ ಬೇಕಾದ ರಸ್ತೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ರಚಿಸಲು ಯೋಜನೆಗಳನ್ನು ರೂಪಿಸುವುದು.

d. ರಸ್ತೆಗಳ ಮೌಲ್ಯವನ್ನು ಹೆಚ್ಚಿಸಲು ವಿಸ್ತಾರವಾದ ಒಳಚರಂಡಿ ವ್ಯವಸ್ಥೆ ಜಾಲವನ್ನು ರೂಪಿಸುವುದು.

e. ವಾಹನಗಳ ಪಾರ್ಕಿಂಗ್ ಕುರಿತಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.

f. ಮೇಲಿನ ಎಲ್ಲಾ ಕೆಲಸಗಳು ಏಕೀಕೃತ ಸಂಚಾರ ಯೋಜನೆಯ ಭಾಗವಾಗಿದ್ದು ಅವುಗಳನ್ನು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಲಾಗುವುದು.

**iv. ನಗರ ಭೂ ಸಾರಿಗೆ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ನೌಕರರ ವಿವರ ಹಾಗೂ ಕರ್ತವ್ಯಗಳು**

| ಕ್ರ.ಸಂ | ಅಧಿಕಾರಿಯವರ ಹೆಸರು ಮತ್ತು ಪದನಾಮ | ಕಛೇರಿ ವಿಳಾಸ | ಕರ್ತವ್ಯ ಮತ್ತು ಜವಾಬ್ದಾರಿಗಳು |
|---|---|---|---|
| 1. | ಆಯುಕ್ತರು, ನಗರ ಭೂ ಸಾರಿಗೆ & ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | ನಿರ್ದೇಶನಾಲಯದ ಮುಖ್ಯಸ್ಥರಾಗಿದ್ದು ಕರ್ನಾಟಕ ಸರ್ಕಾರದ ಕಾಯ್ದೆ ಹಾಗೂ ನಿಯಮಗಳಿಗೆ ಒಳಪಟ್ಟು ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಸಮಗ್ರ ಮೇಲ್ವಿಚಾರಣೆ ನಿಯಂತ್ರಣ ಹಾಗೂ ಎಲ್ಲಾ ವ್ಯವಹಾರದ ಜವಾಬ್ದಾರಿಯನ್ನು ಹೊಂದಿರುತ್ತಾರೆ. |
| 2. | ಜಂಟಿ ನಿರ್ದೇಶಕರು | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಆಡಳಿತ ವಿಭಾಗದ ಮುಖ್ಯಸ್ಥರಾಗಿದ್ದು, ಆಡಳಿತ ವಿಭಾಗದ ಮೇಲ್ವಿಚಾರಣೆ ಹಾಗೂ ನಿರ್ದೇಶನಾಲಯಕ್ಕೆ ವೇತನ ಮತ್ತು ಬಟವಾಡೆ ಅಧಿಕಾರಿ ಆಗಿರುವುದರಿಂದ ಹಣಕಾಸಿನ ವಿಚಾರಗಳಿಗೆ ಸಂಬಂಧಪಟ್ಟಂತೆ ಪರಿಶೀಲನೆ ಹಾಗೂ ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುತಾರೆ<br>2. ಈ ನಿರ್ದೇಶನಾಲಯದ ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿಕಾರಿಯಾಗಿರುತ್ತಾರೆ.<br>3. ಆಯುಕರು, ಕಾಲಕಾಲಕ್ಕೆ ನೀಡುವ ಆದೇಶಗಳನ್ನು, ಜವಾಬ್ದಾರಿಗಳನ್ನು ನಿರ್ವಹಿಸುವುದು ಹಾಗೂ ನಿರ್ದೇಶನಾಲಯದ ಆಡಳಿತದ ಬಗ್ಗೆ ಸಲಹೆ ಸಹಕಾರ ನೀಡುವುದು. |
| 3. | ಆಡಳಿತಾಧಿಕಾರಿಗಳು | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ, ಮೇಲ್ವಿಚಾರಣೆ, ತಾಂತ್ರಿಕ ಹಾಗೂ ಆಡಳಿತ ಸಮನ್ವಯಾಧಿಕಾರಿ ಮತ್ತು ಆಯುಕ್ತರು ಹಾಗೂ ಮೇಲಧಿಕಾರಿಗಳು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ.<br>2. ಇವರು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ. |
| 4. | ವಿಶೇಷಾಧಿಕಾರಿ | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಮುಖ್ಯಸ್ಥರಾಗಿದ್ದು, ಈ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳ ಪ್ರಸಾವನೆಗಳ ಪರಿಶೀಲನೆ ಅನುಷ್ಠಾನ ಮೇಲ್ವಿಚಾರಣೆ, ಭೂ ಬಳಕೆ ಸಾರಿಗೆ ನಕ್ಷೆಯ ಉಸ್ತುವಾರಿ ಹಾಗೂ ಈ ಪ್ರಸ್ತಾವನೆಗಳನ್ನು ಅಂಗೀಕರಿಸುವ ಮತ್ತು ಅನುಷ್ಠಾನಗೊಳಿಸುವ ಬಗ್ಗೆ ಆಯುಕರಿಗೆ ಸೂಕ್ತ ಸಲಹೆ ಹಾಗೂ ಸಹಕಾರ ನೀಡುವುದು.<br>2. ಇವರು ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ<br>3. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ. |
| 5. | ಸಹಾಯಕ ನಿರ್ದೇಶಕರು | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಈ ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಸಾರಿಗೆ ವ್ಯವಸ್ಥೆಯ ಅನುಷ್ಠಾನ, ಭೂ ಬಳಕೆ, ನಗರ ಸಾರಿಗೆ ನಕ್ಷೆಯ ತಯಾರಿ ಹಾಗೂ ವಿವಿಧ ಪ್ರಸಾವನೆಗಳ ಬಗ್ಗೆ ತಾಂತ್ರಿಕ ಪರಿಶೀಲನೆ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ವಿಶೇಷಾಧಿಕಾರಿಗೆ ಸಲಿಸುವುದು.<br>2. ತಾಂತ್ರಿಕ ವಿಭಾಗಕ್ಕೆ ಸಂಬಂಧಿಸಿದಂತೆ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತಾರೆ.<br>3. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ. |
| 6. | ಸಹಾಯಕ ನಿರ್ದೇಶಕರು-1 | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಈ ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಸಾರಿಗೆ ವ್ಯವಸ್ಥೆಯ ಅನುಷ್ಠಾನ, ಭೂ ಬಳಕೆ, ನಗರ ಸಾರಿಗೆ ನಕ್ಷೆಯ ತಯಾರಿ ಹಾಗೂ ವಿವಿಧ ಪ್ರಸಾವನೆಗಳ ಬಗ್ಗೆ ತಾಂತ್ರಿಕ ಪರಿಶೀಲನೆ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ವಿಶೇಷಾಧಿಕಾರಿಗೆ ಸಲ್ಲಿಸುವುದು. |

| | | | |
|---|---|---|---|
| | | | 2. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ. |
| 7. | ಸಹಾಯಕ ಕಾರ್ಯಪಾಲಕ ಅಭಿಯಂತರರು | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದು, ಇಲಾಖೆಯಲ್ಲಿ ಸ್ವೀಕೃತಗೊಂಡ ಸಿವಿಲ್ ಕಾಮಗಾರಿಗೆ ಸಂಬಂಧಿಸಿದ ನೀಲ ನಕ್ಷೆಗಳು ಮತ್ತು ಅಂದಾಜುಪಟ್ಟಿಗಳನ್ನು ನಿಯಮಕ್ಕನುಸಾರೆ ಪರಿಶೀಲಿಸಿ ಆಯುಕರಿಗೆ ಸೂಕ್ತ ಸಲಹೆ ಮತ್ತು ಸಹಕಾರ ನೀಡುವುದು. ವಿಷಯಗಳನ್ನು ಪರಿಶೀಲಿಸಿ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕರ ಅನುಮೋದನೆಗೆ ಕಡತ ಸಲ್ಲಿಸುವುದು. |
| 8. | ಲೆಕ್ಕಾಧಿಕಾರಿ | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ನಿರ್ದೇಶನಾಲಯಕ್ಕೆ ಸಂಬಂಧಿಸಿದ ಆಯವ್ಯಯ ನಿರ್ವಹಣೆ, ನಿರ್ದೇಶನಾಲಯದ ವಾರ್ಷಿಕ ಕಾರ್ಯನಿರ್ವಹಣೆಯ ವರದಿ ತಯಾರಿಸುವುದು. ಹಣ ಬಿಡುಗಡೆ ಮತ್ತು ಮರುಹೊಂದಾಣಿಕೆ ಬಗ್ಗೆ ತಮ್ಮ ಅಭಿಪ್ರಾಯದೊಂದಿಗೆ ಕಡತವನ್ನು ಮೇಲಧಿಕಾರಿಗೆ ಸಲ್ಲಿಸುವುದು. |
| 9. | ದಸ್ತಾವೇಜು ತಜ್ಞರು | ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್, 4ನೇ ಮಹಡಿ ಬಸ್ ಸ್ಟಾಂಡ್ ಮೇಲ್ಭಾಗ 4ನೇ ಮಹಡಿ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗುವ ಪ್ರಸ್ತಾವನೆ ನಕ್ಷೆಗಳು ಯೋಜನೆಗಳು ಹಾಗೂ ಇತರೆ ದಾಖಲೆಗಳ ನಿರ್ವಹಣೆ. |
| 10. | ಉಳಿಕೆ ಸಿಬ್ಬಂದಿಗಳ ಸೇವೆಯನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ. | | |

**v. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ**

- **ಆಯುಕ್ತರು, ನಗರ ಭೂ ಸಾರಿಗೆ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ :** ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಸಮಗ್ರ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯ ಹಾಗೂ ನಿಗದಿ ಪಡಿಸದಂತಹ ಆರ್ಥಿಕ ಪ್ರತ್ಯಾ ಯೋಜನೆ ರೀತ್ಯಾ ಆದೇಶ ನೀಡುವುದು.
- **ಜಂಟಿ ನಿರ್ದೇಶಕರು**: ಅಧೀನ ಅಧಿಕಾರಿಗಳಿಂದ ಸ್ವೀಕೃತಗೊಂಡ ಕಡತಗಳ ಸಮಗ್ರ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು. ನಿಗದಿ ಪಡಿಸಿದಂತಹ ಆರ್ಥಿಕ ಪ್ರತ್ಯಾ ಯೋಜನೆಯನ್ವಯ ಪತ್ರ ಅಥವಾ ಆದೇಶಗಳನ್ನು ಹೊರಡಿಸಲು ಅನುಮೋದನೆ ನೀಡುವುದು.
- **ಆಡಳಿತಾಧಿಕಾರಿ:** ನಿರ್ದೇಶನಾಲಯದ ವಿವಿಧ ಶಾಖೆಗಳಿಂದ ಬಂದಂತಹ ಕಡತಗಳಲ್ಲಿ ನಿರ್ದಿಷ್ಟ ಅಭಿಪ್ರಾಯ ಹಾಗೂ ಚಾಲ್ತಿಯಲ್ಲಿರುವ ನಿಯಮಾನುಸಾರ ಕಡತವನ್ನು ಮೇಲಧಿಕಾರಿಗಳಿಗೆ ಹಾಗೂ ಅವರ ಟಿಪ್ಪಣಿಗಳ ಅನುಸಾರ ಪತ್ರ ಅಥವಾ ಆದೇಶಗಳನ್ನು ಹೊರಡಿಸುವುದು.
- **ವಿಶೇಷಾಧಿಕಾರಿ:** ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಮೇಲುಸ್ತುವಾರಿ. ವಿವಿಧ ನಗರ ಪ್ರದೇಶಗಳ ಸಾರಿಗೆ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳು ಮತ್ತು ಚಾಲ್ತಿಯಲ್ಲಿರುವ ಯೋಜನೆಗಳ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು.

- **ಸಹಾಯಕ ಕಾರ್ಯಪಾಲಕ ಅಭಿಯಂತರರು:** ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದು, ಇಲಾಖೆಯಲ್ಲಿ ಸ್ವೀಕೃತಗೊಂಡ ಸಿವಿಲ್ ಕಾಮಗಾರಿಗೆ ಸಂಬಂಧಿಸಿದ ನೀಲ ನಕ್ಷೆಗಳು ಮತ್ತು ಅಂದಾಜುಪಟ್ಟಿಗಳನ್ನು ನಿಯಮಕ್ಕನುಸಾರ ಪರಿಶೀಲಿಸಿ ಆಯುಕ್ತರಿಗೆ ಸೂಕ್ತ ಸಲಹೆ ಮತ್ತು ಸಹಕಾರ ನೀಡುವುದು. ವಿಷಯಗಳನ್ನು ಪರಿಶೀಲಿಸಿ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು.
- **ಸಹಾಯಕ ನಿರ್ದೇಶಕರು:** ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ವಿವಿಧ ಯೋಜನೆಗಳ ನಕ್ಷೆ, ಭೂ ಬಳಕೆ, ವಿವಿಧ ಪ್ರಸ್ತಾವನೆಗಳು ಹಾಗೂ ಯೋಜನೆಗಳ ಪರಿಶೀಲನೆ ನಂತರ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಿಗೆ ಕಡತವನ್ನು ಸಲ್ಲಿಸುವುದು.
- **ಲೆಕ್ಕಾಧಿಕಾರಿ:** ನಿರ್ದೇಶನಾಲಯಕ್ಕೆ ಸಂಬಂಧಿಸಿದ ಆಯವ್ಯಯ ನಿರ್ವಹಣೆ, ನಿರ್ದೇಶನಾಲಯದ ವಾರ್ಷಿಕ ಕಾರ್ಯನಿರ್ವಹಣೆಯ ವರದಿ ತಯಾರಿಸುವುದು. ಹಣ ಬಿಡುಗಡೆ ಮತ್ತು ಮರುಹೊಂದಾಣಿಕೆ ಬಗ್ಗೆ ತಮ್ಮ ಅಭಿಪ್ರಾಯದೊಂದಿಗೆ ಕಡತವನ್ನು ಮೇಲಧಿಕಾರಿಗೆ ಸಲ್ಲಿಸುವುದು.
- **ದಸ್ತಾವೇಜು ತಜ್ಞರು:** ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗುವ ಪ್ರಸ್ತಾವನೆ ನಕ್ಷೆಗಳು ಯೋಜನೆಗಳು ಹಾಗೂ ಇತರೆ ದಾಖಲೆಗಳ ನಿರ್ವಹಣೆ.

vi. **ಕಾರ್ಯಗಳ ನಿರ್ವಹಣೆಗೆ ರೂಪಿಸುವ ಸೂತ್ರಗಳು:** ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು 1977, ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) 1977 ನಿಯಮಗಳು, ಕರ್ನಾಟಕ ಸರ್ಕಾರದ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1977 ನಿಯಮಗಳಲ್ಲಿ ನಿಗದಿಪಡಿಸಿರುವ ಕಾರ್ಯಗಳು ಮತ್ತು ಮಾನದಂಡಗಳನ್ನು ಅನುಸರಿಸುವುದು.

vii. **ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ಅಧಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು**

- KCSR- ಕರ್ನಾಟಕ ನಾಗರಿಕ ಸೇವಾ ನಿಯಮಗಳು
- KTPP- ಕರ್ನಾಟಕ ಸರ್ಕಾರದ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ -1999
- KTC- ಕರ್ನಾಟಕ ಖಜಾನೆ ಸಂಹಿತೆ
- KFC- ಕರ್ನಾಟಕ ಆರ್ಥಿಕ ಸಂಹಿತೆ
- KMA- ಕರ್ನಾಟಕ ಪುರಸಭೆಗಳ ಕಾಯ್ದೆ - 1964
- KMCE- ಕರ್ನಾಟಕ ಸಾದಿಲ್ವಾರು ವೆಚ್ಚಗಳ ಕೈಪಿಡಿ
- KTCP- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ
- KMCA- ಕರ್ನಾಟಕ ಪುರಸಭೆ ಕಾಯ್ದೆ - 1976
- KCSR- ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು- 1957
- KCSR- ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು- 1966
- KGS- ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು - 1963

viii. ನಿರ್ದೇಶನಾಲಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ ಮತ್ತು ಅದರ ನಿಯಮಗಳಲ್ಲಿ ಉಪಬಂಧಿಸಿರುವಂತೆ ಪರ್ಯಾಯ ವ್ಯವಸ್ಥೆಯು ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ (ಸಂಬಳ):

| ಕ್ರ.ಸಂ | ಹೆಸರು ಮತ್ತು ಪದನಾಮ | ವೇತನಶ್ರೇಣಿ ಅಥವಾ ವೇತನ ರೂ ಗಳಲ್ಲಿ | ದೂರವಾಣಿ ಸಂಖ್ಯೆ |
|---|---|---|---|
| 1. | ವಿ ಮಂಜುಳ, ಭಾಆಸೇ,<br>ಆಯುಕ್ತರು, ನಗರ ಭೂ ಸಾರಿಗೆ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ | 67000-79000 | 080-22226628<br>080-22226627 |
| 2. | ದಯಾನಂದ ಶೆಟ್ಟಿ,<br>ಜಂಟಿ ನಿರ್ದೇಶಕರು | 40050-56550 | 080-22226627 |
| 3. | ಸುಮತಿ.ಆರ್<br>ವಿಶೇಷಾಧಿಕಾರಿ | 40050-56550 | 080-22226627 |
| 4. | ಆರ್ ನಾಗರಾಜ್<br>ಆಡಳಿತಾಧಿಕಾರಿ | 20600-43850 | 080-22226627 |
| 5. | ವೀಣಾ ಸಿ ನಿರ್ವಾಣಿ<br>ಸಹಾಯಕ ನಿರ್ದೇಶಕರು | 28100-50100 | 080-22226627 |
| 6. | ಆರತಿ ವಿ ಸುನಧೋಳಿ<br>ಸಹಾಯಕ ನಿರ್ದೇಶಕರು | 28100-50100 | 080-22226627 |
| 7. | ಪ್ರಾಣೇಶ್ ಕುಮಾರ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು | 28100-50100 | 080-22226627 |
| 8. | ಡಿ. ರಾಮಲಿಂಗಪ್ಪ<br>ಲೆಕ್ಕಾಧಿಕಾರಿ | 22800-43200 | 080-22226627 |
| 9. | ದಸ್ತಾವೇಜು ತಜ್ಞರು | 11600-21000 | 080-22226627 |
| 10. | ಉಳಿದ ಸಿಬ್ಬಂದಿ ವರ್ಗದ ಸೇವೆಯನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ. | 8,32,591.00 | 080-22226627 |

ix. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

**2014-15ನೇ ಸಾಲಿನ ಆಯವ್ಯಯ-ಯೋಜನೆ ಮತ್ತು ಲೆಕ್ಕಶೀರ್ಷಿಕೆ**

(ರೂ ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನ | ವ್ಯಯಿಸಲಾದ ಮೊತ್ತ (16.03.2015) |
|---|---|---|
| 2217-80-800-0-23-059 | 69162000/- | 55975861/- |

1. ನಗರ ಭೂ ಸಾರಿಗೆ ನಿರ್ದೇಶನಾಲಯವು ಕಳೆದ ಕೆಲವು ವರ್ಷಗಳಲ್ಲಿ ಒಂದು ಬಲಿಷ್ಠ ಸಂಸ್ಥೆಯಾಗಿ ಬೆಳೆದಿದೆ. ಈ ಹಿಂದಿನ ವರ್ಷಗಳಲ್ಲಿ ಎಲ್ಲಾ ಆರು ನಗರ ಪಾಲಿಕೆಗಳಿಗೆ ಸಾರಿಗೆ ಯೋಜನೆಗಳನ್ನು ರೂಪಿಸಲಾಗಿದೆ. ತುಮಕೂರು ಮತ್ತು ಉಡುಪಿ ಸಾರಿಗೆ ಯೋಜನೆಯು ಅಂತಿಮಗೊಂಡಿದ್ದು, ಶಿವಮೊಗ್ಗ-ಭದ್ರಾವತಿ, ದಾವಣಗೆರೆ, ಚಿತ್ರದುರ್ಗ, ಬೀದರ್, ಬಿಜಾಪುರ, ರಾಯಚೂರು ಮತ್ತು ಹೊಸಪೇಟೆ ಸೇರಿದಂತೆ ನಗರಗಳ ಸಮಗ್ರ ಸಂಚಾರ ಯೋಜನೆಗಳು ಅಂತಿಮ ಹಂತಗಳಲ್ಲಿವೆ.

2. ನಗರ ಭೂ ಸಾರಿಗೆ ನಿರ್ದೇಶನಾಲಯವು,ಬೆಂಗಳೂರು ಮತ್ತು ಮೈಸೂರು ಸೇರಿದಂತೆ ಒಟ್ಟು 9 ನಗರಗಳಿಗೆ ಪಾರ್ಕಿಂಗ್ ನೀತಿಯನ್ನು ರೂಪಿಸಿದೆ. ಇದರ ಅನ್ವಯ ವಾಹನ ನಿಲುಗಡೆ ಶುಲ್ಕವನ್ನು ನಿಗದಿಪಡಿಸುವ ಮುಖಾಂತರ ವಾಹನ ನಿಲುಗಡೆಯನ್ನು ನಿರ್ವಹಿಸುವುದು. ರಸ್ತೆ ಬದಿ ವಾಹನ ನಿಲುಗಡೆಗೆ ನಿರ್ಬಂಧ ವಿಧಿಸಿ, ನಿಲುಗಡೆಯನ್ನು ನಿಯಮಿತಗೊಳಿಸುವುದು ಮತ್ತು ರಸ್ತೆ ಬದಿಯ ಇಕ್ಕೆಲಗಳಲ್ಲಿ ಹಾಗೂ ರಸ್ತೆಯಾಚೆಯಲ್ಲಿರುವ ವಾಹನ ನಿಲುಗಡೆ ಸಂಪನ್ಮೂಲಗಳ ವೃತ್ತಿಪರ ನಿರ್ವಹಣೆ, ಮುಂತಾದವುಗಳು ವಾಹನ ನಿಲುಗಡೆ ನೀತಿಯ ಕೆಲವು ಪ್ರಮುಖ ಅಂಶಗಳಾಗಿವೆ.

3. ನಗರ ಭೂ ಸಾರಿಗೆ ನಿರ್ದೇಶನಾಲಯವು ಬೃಹತ್ ಬೆಂಗಳೂರಿನ ಪ್ರಮುಖ ಪ್ರದೇಶಗಳಿಗೆನಿಲುಗಡೆ ಕ್ರಿಯಾ ಯೋಜನೆಯನ್ನು ತಯಾರಿಸಿದೆ ಮತ್ತು ಕ್ರಿಯಾ ಯೋಜನೆಯ ಅನುಷ್ಠಾನಕ್ಕಾಗಿ ಬಿಬಿಎಂಪಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ನಿಲುಗಡೆ ಕ್ರಿಯಾ ಯೋಜನೆಯಲ್ಲಿ ರಸ್ತೆ ಮತ್ತು ರಸ್ತೆಯ ಬದಿಯಲ್ಲಿ ನಿಲುಗಡೆಯ ಬೇಡಿಕೆ, ನಿಲುಗಡೆ ಸೌಕರ್ಯಗಳನ್ನು ಗುರುತಿಸಲಾಗಿದ್ದು, ಇದರಿಂದ ನಿಲುಗಡೆಯ ಬೇಡಿಕೆಯನ್ನು ನಿಲುಗಡೆ ಶುಲ್ಕ ವಿಧಿಸುವುದರಿಂದ ನಿಲುಗಡೆಯ ತೊಂದರೆಗಳನ್ನು ನಿವಾರಿಸಬಹುದು. ನಿಲುಗಡೆ ಕ್ರಿಯಾ ಯೋಜನೆಯ ವಿವರಗಳು ರಸ್ತೆ ಬದಿಯ ವಿನ್ಯಾಸ, ಎಲ್ಲಾ ರೀತಿಯ ವಾಹನಗಳ ನಿಲುಗಡೆಯ ಸ್ಥಳಗಳ ಸಂಖ್ಯೆ, ರಸ್ತೆ ಬದಿಯಲ್ಲಿ ನಿಲುಗಡೆಯ ಸ್ಥಳ ಒದಗಿಸುವ ಬಗ್ಗೆ (ಸಮಾನಾಂತರ,ಕೋನೀಯ, ಲಂಬವಾಗಿ), ಆಫ್-ಸ್ಟ್ರೀಟ್ ನಿಲುಗಡೆ, ಸ್ವಯಂಚಾಲಿತ ಮೀಟರಿಂಗ್ ನಿಲುಗಡೆ ವ್ಯವಸ್ಥೆ, ವಿವಿಧ ರೀತಿಯ ವಾಹನಗಳಿಗೆ ನಿಲುಗಡೆ ಶುಲ್ಕ ವಿಧಿಸುವುದು ಮುಂತಾದವನ್ನು ಒಳಗೊಂಡಿರುತ್ತದೆ. ಪಾರ್ಕಿಂಗ್ ಕ್ರಿಯಾ ಯೋಜನೆಯು ಅನುಷ್ಠಾನದ ವಿಧಾನಗಳನ್ನು ಮತ್ತು ಮಾರುಕಟ್ಟೆ ತಂತ್ರಗಳನ್ನು ವಿವರಿಸುತ್ತದೆ.

4. ಬಹುವಿಧದ ಸಾರಿಗೆಗಳನ್ನು ಸಮನ್ವಯಗೊಳಿಸಿ ಸಂಚಾರವನ್ನು ಸರಾಗಗೊಳಿಸುವುದು ಪ್ರಸ್ತುತ ಆಗಲೇ ಬೇಕಾದ ಕೆಲಸವಾಗಿದೆ. ನಗರ ಭೂ ಸಾರಿಗೆ ನಿರ್ದೇಶನಾಲಯವು ಮೆಟ್ರೋ ನಿಲ್ದಾಣಗಳಲ್ಲಿ ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಜನಪ್ರಿಯಗೊಳಿಸಲು ಬಹುವಿಧದ ಸಾರಿಗೆ ಮಾಧ್ಯಮಗಳನ್ನು ಸಮನ್ವಯಗೊಳಿಸುವುದು ಅತ್ಯಗತ್ಯವಾದ ಅಂಶವಾಗಿದೆ ಎಂಬುದನ್ನು ಗುರುತಿಸಿದೆ. ನಿರ್ದೇಶನಾಲಯವು ಎಲ್ಲಾ ಮೆಟ್ರೋ ನಿಲ್ದಾಣಗಳಿಗೆಸಂಪರ್ಕ ಕಲ್ಪಿಸುವ ಯೋಜನೆಗಳನ್ನು ತಯಾರಿಸುವ ಹಂತದಲ್ಲಿದ್ದು ಒಟ್ಟು 12 ಮೆಟ್ರೋ ನಿಲ್ದಾಣಗಳಿಗೆ ಯೋಜನೆ ರೂಪಿಸಲು ಕಾರ್ಯಾದೇಶವನ್ನು ನೀಡಲಾಗಿದೆ. ಈ ಯೋಜನೆಯ ಪ್ರಮುಖ ಉದ್ದೇಶವು ಪಾದಚಾರಿಗಳು ಹಾಗೂ ಸಾರ್ವಜನಿಕ ಸಾರಿಗೆ ಬಳಕೆದಾರರು ಮೆಟ್ರೋ ನಿಲ್ದಾಣಗಳನ್ನು ತಲುಪುವುದನ್ನು ತ್ವರಿತಗೊಳಿಸುವುದಾಗಿದೆ. ಈ ಯೋಜನೆಗಳನ್ನು 2014ರ ಮಾರ್ಚ್ ತಿಂಗಳೊಳಗಾಗಿ ಅಂತಿಮಗೊಳಿಸುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ.

5. ಸಂಚಾರ ಯೋಜನೆಗಳ ಬಗ್ಗೆ ಒತ್ತು ನೀಡುವುದನ್ನು ಮುಂದುವರಿಸಿ, ನಿರ್ದೇಶನಾಲಯವು ಸಂಚಾರ ಯೋಜನೆಗಳಲ್ಲಿನ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ತುಮಕೂರು ಜಿಲ್ಲೆಯಲ್ಲಿ ರಸ್ತೆಯ ಸಮರ್ಪಕ ಬಳಕೆ ಹಾಗೂ ವೃತ್ತಗಳ ನಿರ್ವಹಣೆಯ ಗುರಿ ಹೊಂದಿರುವ ಪ್ರಾತ್ಯಕ್ಷಿಕೆ ಯೋಜನೆಗಳು ಜಾರಿಯಲ್ಲಿವೆ. 1.9 ಮಿಲಿಯನ್ ಅಮೆರಿಕನ್ ಡಾಲರ್ ಜಿಇಎಫ್ ಅನುದಾನದ ನೆರವಿನೊಂದಿಗೆ ಮೈಸೂರು ನಗರದಲ್ಲಿ ಸಾರ್ವಜನಿಕ ಬೈಕ್ ಷೇರಿಂಗ್ ಪ್ರಸ್ತಾವನೆಯು ತಯಾರಿಹಂತದಲ್ಲಿದೆ.

6. ನಗರ ಸಾರಿಗೆ ನಿಧಿಯನ್ನು ಎರಡನೇ ಸ್ತರದ ನಗರಗಳಲ್ಲಿ ನಗರ ಬಸ್ ಸೇವೆಯನ್ನು ಪರಿಚಯಿಸಲು ಮತ್ತು ಬಲಗೊಳಿಸಲು ವಿನಿಯೋಗಿಸಲಾಗುತ್ತಿದೆ. ತುಮಕೂರು, ಹಾಸನ, ದಾವಣಗೆರೆ, ಮಂಡ್ಯ, ಗದಗ-ಬೆಟಗೇರಿ, ಗುಲ್ಬರ್ಗ ಮತ್ತು ಇತರೆ ನಗರಗಳಲ್ಲಿ ನಗರ ಬಸ್ ಸೇವೆಯು ಹೆಚ್ಚು ಜನಪ್ರಿಯವಾಗಿದ್ದು, ಇದು ಚಿಕ್ಕ ನಗರಗಳಲ್ಲೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಬಹುಮುಖ್ಯ ವಾದ ಅಂಶವೆಂದು ತೋರಿಸುತ್ತದೆ. ನಗರ ಭೂ ಸಾರಿಗೆ ನಿರ್ದೇಶನಾಲಯವು ತುಮಕೂರು, ದಾವಣಗೆರೆ, ಹಾಸನ, ಮಂಡ್ಯ, ಕೆಜಿಎಫ್, ಕೋಲಾರಗಳಲ್ಲಿ ನಗರ ಬಸ್ ಸೇವೆಯ ಸಮೀಕ್ಷೆ ಕೈಗೊಂಡಿತ್ತು. ನಗರ ಬಸ್ ಸೇವೆಯಿಂದ ಪ್ರಯಾಣಿಕರ ಪ್ರಯಾಣ ವೆಚ್ಚವು ಕಡಿಮೆಗೊಂಡಿದ್ದು, ಹಣದ ಉಳಿತಾಯವಾಗುತ್ತಿದೆಂದು ಸಮೀಕ್ಷೆಯಿಂದ ತಿಳಿದು ಬಂದಿತು. ಹಾಸನ ನಗರ ಬಸ್ ಸೇವೆಯು ಅನುಷ್ಠಾನಗೊಂಡ ಬಹಳ ಕಡಿಮೆ ಸಮಯದಲ್ಲಿ ಲಾಭ ಕಂಡಿರುವುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಬೀದರ್, ಯಾದಗಿರ್, ಬಿಜಾಪುರ, ಬಳ್ಳಾರಿ ನಗರ ಬಸ್ ಸೇವೆಗಳು ಭಾಗಶಃ ನಗರ ಸಾರಿಗೆ ನಿಧಿಯಿಂದ ಅನುದಾನ ಮಾಡಲಾಗಿದೆ. ಪ್ರಸಕ್ತ ವರ್ಷ ಇದುವರೆಗೂರೂ 47.48 ಕೋಟಿಗಳನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವಜನಿಕ ಸಾರಿಗೆ ಮತ್ತು ಮೋಟಾರು ರಹಿತ ಸಾರಿಗೆ ಉತ್ತೇಜಿಸಲು ಬಿಡುಗಡೆ ಮಾಡಲಾಗಿದೆ.

7. **ಹುಬ್ಬಳ್ಳಿ-ಧಾರವಾಡ ನಗರಕ್ಕಾಗಿ ತ್ವರಿತ ಬಸ್ ಸಾರಿಗೆ ವ್ಯವಸ್ಥೆ (BRTS):**

ಹುಬ್ಬಳ್ಳಿ- ಧಾರವಾಡ ನಗರಗಳ ಮಧ್ಯೆ 20 ಕಿ.ಮೀ. ಅಂತರವಿದ್ದು, ಧಾರವಾಡ ನಗರವು ಜಿಲ್ಲಾ ಕೇಂದ್ರವಾಗಿದ್ದು ಅನೇಕ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಹಾಗೆಯೇ ಹುಬ್ಬಳ್ಳಿ ನಗರವು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಈ ಅವಳಿ ನಗರಗಳ ಮಧ್ಯೆ ಪ್ರತಿದಿನ ಒಟ್ಟು 1,70,000 ಟ್ರಿಪ್‌ಗಳ ಸಂಚಾರ ಇರುತ್ತದೆ. ಈ ನಗರಗಳ ಮಧ್ಯೆ ಸಂಚರಿಸುವ ಒಟ್ಟು ಸಂಖ್ಯೆಯ ವಾಹನಗಳ ಪೈಕಿ ಬಸ್‌ಗಳು ಕೇವಲ ಶೇ. 7ರಷ್ಟು ಇದ್ದರೂ, ಈ ಕಾರಿಡಾರ್‌ನಲ್ಲಿ ಬಸ್ ಪ್ರಯಾಣ ಜನಪ್ರಿಯವಾಗಿದ್ದು, ಸಂಚರಿಸುವ ಪ್ರಯಾಣಿಕರು ಸುಮಾರು ಶೇ.70ರಷ್ಟಿದ್ದಾರೆ. ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿರುವ ಒಟ್ಟು ಮೋಟಾರು ವಾಹನಗಳ ಸಂಖ್ಯೆ 3,38,481 (ಮಾರ್ಚ್ 2011ರಲ್ಲಿ ಇದ್ದಂತೆ) ಹಾಗೂ ಈ ಸಂಖ್ಯೆಯು ವಾರ್ಷಿಕವಾಗಿ ಸರಾಸರಿ ಶೇ.14ರಷ್ಟು ಹೆಚ್ಚಳವಾಗುತ್ತಿದೆ. ವೈಯಕ್ತಿಕ ವಾಹನಗಳ ಸಂಖ್ಯೆಯ ಹೆಚ್ಚಳದಿಂದಾಗಿ ಈ ನಗರಗಳ ನಡುವಣ ರಸ್ತೆಯುದ್ದಕ್ಕೂ ಸಂಚಾರ ದಟ್ಟಣೆ ಉಂಟಾಗಿದೆ. ಈ ನಗರಗಳ ನಡುವೆ ಸಂಚಾರ ದಟ್ಟಣೆ ಇಲ್ಲದ ವೇಳೆಯಲ್ಲಿ ಸಂಚರಿಸಲು 45 ನಿಮಿಷ ಹಿಡಿಯಲಿದ್ದು, ಸಂಚಾರ ದಟ್ಟಣೆಯ ಅವಧಿಯಲ್ಲಿ 20 ಕಿ.ಮೀ. ದೂರವನ್ನು ಕ್ರಮಿಸಲು 60 ನಿಮಿಷಗಳು ಬೇಕಾಗುತ್ತದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಕರ್ನಾಟಕ ಸರ್ಕಾರದ ಒಡೆತನದಲ್ಲಿರುವ ಒಂದು ಸಂಸ್ಥೆಯಾಗಿದ್ದು, ಇದು ಹುಬ್ಬಳ್ಳಿ–ಧಾರವಾಡ ಅವಳಿ ನಗರದ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ. ಪ್ರಸ್ತುತ ಹುಬ್ಬಳ್ಳಿ–ಧಾರವಾಡ ನಗರದ ಒಟ್ಟು ಶೇ.30ರಷ್ಟು ಸಂಚಾರಗಳು ಸಮೂಹ ಸಾರಿಗೆ ಮೂಲಕ ನಡೆಯುತ್ತಿದೆ. ಹುಬ್ಬಳ್ಳಿ–ಧಾರವಾಡಕ್ಕಾಗಿ ತಯಾರಿಸಿದ ಸಮಗ್ರ ಸಾರಿಗೆ ಮತ್ತು ಸಂಚಾರ ಯೋಜನೆ ವರದಿ (ಸಿಟಿಟಿಪಿ) ಪ್ರಕಾರ, ಈ ನಗರದಲ್ಲಿ ಸಮೂಹ ಸಾರಿಗೆಗೆ ಉತ್ತೇಜನ ನೀಡುವ ಕ್ರಮಗಳನ್ನು ಕೈಗೊಳ್ಳದಿದ್ದರೆ, 2028ನೇ ಇಸವಿ ಹೊತ್ತಿಗೆ ಸಮೂಹ ಸಾರಿಗೆ ಸೇವೆಯ ಪಾಲು ಗಣನೀಯವಾಗಿ ಇಳಿಮುಖವಾಗಲಿದೆ ಎಂಬ ಅಂಶ ತಿಳಿದುಬಂದಿದೆ. ಈ ನಿಟ್ಟಿನಲ್ಲಿ ಸಮಗ್ರ ಸಂಚಾರ ಸಾರಿಗೆ ಯೋಜನೆಯು ಹುಬ್ಬಳ್ಳಿ–ಧಾರವಾಡ ನಗರದಲ್ಲಿ ಹಂತಹಂತವಾಗಿ 70 ಕಿ.ಮೀ. ಉದ್ದದ ತ್ವರಿತ ಬಸ್ ಸಾರಿಗೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವಂತೆ ಶಿಫಾರಸು ಮಾಡಿದೆ.

ಈ ಅವಳಿ ನಗರಗಳಲ್ಲಿ ಸಮೂಹ ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹುಬ್ಬಳ್ಳಿ–ಧಾರವಾಡ ನಡುವೆ ತ್ವರಿತ ಬಸ್ ಸಾರಿಗೆಯ ಯೋಜನೆಯನ್ನು (ಃಖಖಿಖ) ರೂಪಿಸಲಾಗಿದೆ. ಬಿಆರ್‌ಟಿಎಸ್ ವ್ಯವಸ್ಥೆಯು ಕಡಿಮೆ ಪ್ರಯಾಣಿಕರ ಸಂಚಾರದ ಮತ್ತು ಹೆಚ್ಚಿನ ಪ್ರಯಾಣಿಕರ ಸಂಚಾರದ ಇವೆರಡೂ ಬಗೆಯ ಒತ್ತಡವನ್ನು ನಿಭಾಯಿಸುವ ಅವಕಾಶ ಕಲ್ಪಿಸುತ್ತದೆ ಮತ್ತು ಉತ್ತಮ ಗುಣಮಟ್ಟದ ಮತ್ತು ಕಡಿಮೆ ವೆಚ್ಚದ ಪ್ರಯಾಣಿಕ ಸ್ನೇಹಿಯಾದ ಉತ್ತಮ ಸಾರಿಗೆ ಸೇವೆ ಒದಗಿಸುತ್ತದೆ. ಬಿಆರ್‌ಟಿಎಸ್‌ನ ಪ್ರಮುಖ ಉದ್ದೇಶಗಳೆಂದರೆ, ಖಾಸಗಿ ವಾಹನಗಳ ಮೇಲಿನ ಅವಲಂಬನೆಯನ್ನು ತಗ್ಗಿಸುವುದು, ಆ ಮೂಲಕ ಸಂಚಾರ ದಟ್ಟಣೆ ನಿಯಂತ್ರಿಸುವುದು; ಸಂಚಾರದ ಅವಧಿಯನ್ನು ಕಡಿಮೆ ಮಾಡುವುದು; ಪ್ರಯಾಣಿಕರ ಸುರಕ್ಷತೆ ಹಾಗೂ ಅನುಕೂಲತೆಗಳನ್ನು ಹೆಚ್ಚಿಸುವುದು ಮತ್ತು ವಿಶ್ವಾಸಾರ್ಹವಾದ ಮತ್ತು ಹೆಚ್ಚು ಮೂಲಭೂತ ಸೌಕರ್ಯ ಹೊಂದಿರುವಂಥ ವ್ಯವಸ್ಥೆಯನ್ನು ಕಲ್ಪಿಸುವುದೇ ಆಗಿದೆ.

ಪ್ರಸ್ತುತ ಅನುಷ್ಠಾನಗೊಳಿಸುತ್ತಿರುವ ಬಿಆರ್‌ಟಿಎಸ್ ಕಾರಿಡಾರ್‌ನ ಉದ್ದ 22.25 ಕಿ.ಮೀ. ಹಾಗೂ ರಸ್ತೆಯ ಅಗಲ ನಗರಗಳ ಮಿತಿಯೊಳಗೆ ಮತ್ತು ಹೊರಗೆ ಅನುಕ್ರಮವಾಗಿ 44 ಮೀ. ಮತ್ತು 35 ಮೀ. ಆಗಿರುತ್ತದೆ. ಈ ಯೋಜನೆಯಲ್ಲಿ ಒಳಗೊಂಡಿರುವ ಕೆಲವು ಅಂಶಗಳೆಂದರೆ ಮಧ್ಯಭಾಗದಲ್ಲಿ ಬಸ್‌ಲೇನ್‌ಗಳಿರುವ ಪ್ರತ್ಯೇಕ ಬಸ್ ಮಾರ್ಗಗಳು ಮತ್ತು ಮಧ್ಯೆ ಮಧ್ಯೆ ಬಸ್ ನಿಲ್ದಾಣಗಳು, ಪ್ರಧಾನ ಹಾಗೂ ಸಂಪರ್ಕ ಬಸ್‌ಗಳ ವ್ಯವಸ್ಥೆ; ಸಮತಟ್ಟಾದ ಕಟ್ಟೆಯಿದ್ದು ಸುಲಭವಾಗಿ ಪ್ರವೇಶಿಸಲು ಸಾಧ್ಯವಿರುವ ಮತ್ತು ಅನುಕೂಲಕರವಾದ ಬಸ್‌ನಿಲ್ದಾಣಗಳು; ಬಾಹ್ಯ ಟಿಕೆಟ್ ನೀಡಿಕೆ ವ್ಯವಸ್ಥೆ, ಸುಧಾರಿತ ಬಸ್‌ಗಳು, ಹುಬ್ಬಳ್ಳಿ–ಧಾರವಾಡ ನಗರದ ಸಾರಿಗೆ ನಿರ್ವಹಣೆ ಕೇಂದ್ರ ಇತ್ಯಾದಿ. ಬಿಆರ್‌ಟಿಎಸ್ ಬಸ್‌ಗಳಿಗಾಗಿ ಪ್ರತ್ಯೇಕ ಪಥ ಮೀಸಲಿದ್ದು, ಈ ಪಥವು ಬಿ.ಆರ್.ಟಿ.ಎಸ್ ಬಸ್‌ಗಳಿಗೆ ಮಾತ್ರ ಲಭ್ಯವಿದ್ದು ಬೇರೆ ಯಾವುದೇ ವಾಹನಗಳಿಗೆ ಇಲ್ಲಿ ಪ್ರವೇಶ ಇರುವುದಿಲ್ಲ. ಈ ಮಾರ್ಗದಲ್ಲಿ ಎರಡು ರೀತಿಯ ಸೇವೆಗಳು ಲಭ್ಯವಿದ್ದು, ಒಂದು ಸಾಮಾನ್ಯ ಮತ್ತೊಂದು ವೇಗದೂತ ಸೇವೆಗಳನ್ನು ವಿವಿಧ ಪ್ರಯಾಣಿಕರ ಅಗತ್ಯಕ್ಕೆ ತಕ್ಕಂತೆ ಒದಗಿಸಲಾಗಿದೆ. ಏಳು ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಪ್ರಯಾಣಿಕರು ಬಸ್ ನಿಲ್ದಾಣಗಳಿಗೆ ಸುಲಭವಾಗಿ ತಲುಪಲು ಅನುಕೂಲವಾಗುವಂತೆ ವಿವಿಧ ಸ್ಥಳಗಳಲ್ಲಿ **ಪೆಲಿಕಾನ್** ಸಿಗ್ನಲ್‌ಗಳು ಮತ್ತು ಏಕೀಕೃತ ಸಿಗ್ನಲ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯಲ್ಲಿ ಸುಮಾರು 60 ಕಿ.ಮೀ. ಪ್ರದೇಶದಲ್ಲಿ ಸಾರಿಗೆ ಮೂಲಭೂತ ಸೌಕರ್ಯಗಳಾದ ಟರ್ಮಿನಲ್‌ಗಳು, ಡಿಪೋಗಳು, ಇಂಟರ್‌ಚೇಂಜ್‌ಗಳು ಮತ್ತು ಮೋಟಾರ್ ರಹಿತ ಸಾರಿಗೆಗೆ ಮೂಲಭೂತ ಸೌಕರ್ಯಗಳ ಸುಧಾರಣೆಗಳು ಒಳಗೊಳ್ಳುತ್ತವೆ. ಈ ಯೋಜನೆಯ ವೆಚ್ಚ 692 ಕೋಟಿ ರೂ.ಗಳೆಂದು ಅಂದಾಜಿಸಲಾಗಿದ್ದು, ಇದರಲ್ಲಿ 47 ಮಿಲಿಯನ್ ಅಮೆರಿಕನ್ ಡಾಲರ್‌ಗಳನ್ನು ಎಸ್‌ಯುಟಿಪಿ ನೆರವುಳ್ಳ ವಿಶ್ವ ಬ್ಯಾಂಕಿನ ಗ್ಲೋಬಲ್ ಪರಿಸರ ನಿಧಿಯಿಂದ (ಜಿಇಎಫ್) ಹಣಕಾಸು ನೆರವನ್ನು ನಿರೀಕ್ಷಿಸಲಾಗಿದೆ. ಇದರೊಂದಿಗೆ, 1.9 ಮಿಲಿಯನ್ ಅಮೆರಿಕನ್ ಡಾಲರ್‌ಗಳ ತಾಂತ್ರಿಕ ನೆರವು ಸಿಗಲಿದ್ದು, ಇದನ್ನು ಯೋಜನೆಗೆ ಸಂಬಂಧಿಸಿದ ಸಂವಹನ ಮತ್ತು ವಿಸ್ತರಣಾ ಕಾರ್ಯಕ್ರಮ, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಅಧ್ಯಯನ, ನಗರ ಬಸ್ ಮಾರ್ಗ ಪುನರ್ವ್ಯವಸ್ಥೆ ಅಧ್ಯಯನ, ಪಾರ್ಕಿಂಗ್ ನಿರ್ವಹಣಾ ಯೋಜನೆ, ಸಮಗ್ರ ಸಾರಿಗೆ ಮತ್ತು ಭೂ ಬಳಕೆ ಯೋಜನೆ ಮುಂತಾದವುಗಳಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಬಿಆರ್‌ಟಿಎಸ್ ಯೋಜನೆಯು ಹುಬ್ಬಳ್ಳಿ–ಧಾರವಾಡ ನಗರದ ಮತ್ತು ಆ ಪ್ರದೇಶದ ಜನತೆಗೆ ಹೆಚ್ಚಿನ ಅನುಕೂಲತೆ ಕಲ್ಪಿಸಲಿದ್ದು, ಈ ವ್ಯವಸ್ಥೆಯ ಅನುಕೂಲತೆಯನ್ನು ವಿವರವಾದ ಅಧ್ಯಯನಗಳ ಮೂಲಕ ಕಂಡುಕೊಳ್ಳಲಾಗಿದೆ.

ಬಿ.ಆರ್.ಟಿ.ಎಸ್ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಬಸ್ ಕಾರ್ಯಾಚರಣೆಗಳ ಮೇಲ್ವಿಚಾರಣೆ ಮಾಡಲು, ಕಂಪನಿಗಳ ಅಧಿನಿಯಮದಡಿಯಲ್ಲಿ, "ಹುಬ್ಬಳ್ಳಿ–ಧಾರವಾಡ ಬಿ.ಆರ್.ಟಿ.ಎಸ್ ಕಂಪನಿ ನಿಯಮಿತ" (ಹೆಚ್‌ಡಿಬಿಆರ್‌ಟಿಎಸ್) ಎಂಬ ಒಂದು ಕಂಪನಿಯನ್ನು ಸ್ಥಾಪಿಸಲಾಗಿದೆ. ಹೆಚ್.ಡಿ.ಬಿ.ಆರ್.ಟಿ.ಎಸ್ ಯೋಜನೆಗಾಗಿ 2014–15ನೇ ಸಾಲಿನ ಹಣಕಾಸು ವರ್ಷದಲ್ಲಿ, ಬಜೆಟ್‌ನಲ್ಲಿ ಲೆಕ್ಕಶೀರ್ಷಿಕೆ "4217–60–800–0–01–059" ಅಡಿಯಲ್ಲಿ 200 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಇದುವರೆಗೆ ಆಗಿರುವ ಕಾರ್ಯಪ್ರಗತಿ ಈ ಮುಂದಿನಂತಿದೆ:

- **ಸಮಾಲೋಚನೆ ಸೇವೆಗಳನ್ನು ಪಡೆಯುವುದು:** ಹುಬ್ಬಳ್ಳಿ–ಧಾರವಾಡ ನಗರ ಯೋಜನೆಯ ಸಿದ್ಧತೆಯನ್ನುಹೊರತುಪಡಿಸಿ ಸಮಾಲೋಚನಾ ಸೇವೆಗಳನ್ನು ಪಡೆಯುವ ಪ್ರಕ್ರಿಯೆ ಪೂರ್ಣಗೊಂಡಿದೆ. ಸಮಾಲೋಚಕರು ಉಪಸ್ಥಿತರಿದ್ದು ಪರಿಶೀಲನಾಂಶಗಳಿಗೆ ಅನುಸಾರವಾಗಿ ಕಾರ್ಯಗಳನ್ನು ಕೈಗೊಂಡಿದ್ದಾರೆ.
- **ಕಾಮಗಾರಿಗಳ ನಿರ್ವಹಣೆ:** ಈ ಮುಂದಿನ ಸಾರಿಗೆ ಮೂಲಸೌಕರ್ಯಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ:

ಎ. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಿ.ಆರ್.ಟಿ ಡಿಪೋಗಳು ಹಾಗೂ ಹುಬ್ಬಳ್ಳಿಯಲ್ಲಿ ವಿಭಾಗೀಯ ಕಾರ್ಯಾಗಾರ.

ಬಿ. ಧಾರವಾಡದಲ್ಲಿ ಓಸಿಬಿಎಸ್

ಸಿ. ಹೊಸೂರು, ಹುಬ್ಬಳ್ಳಿಯಲ್ಲಿ ಪ್ರಾದೇಶಿಕ ಟರ್ಮಿನಲ್ ಹಾಗೂ ಡಿಪೊ

ಡಿ. ಬಿಆರ್‌ಟಿ ಬಸ್ ನಿಲ್ದಾಣಗಳು

ಇ. ಎಸ್‌ಎಂಟಿ ಮೂಲಸೌಕರ್ಯ

- 100 ಗುಣಮಟ್ಟದ ಬಸ್ಸುಗಳನ್ನು ಮತ್ತು 30 ಆರ್ಟಿಕ್ಯುಲೇಟೆಡ್ ಬಸ್ಸುಗಳನ್ನು ಪಡೆಯಲು ಬಸ್ಸುಗಳ ಖರೀದಿ ಆದೇಶ ಸಲ್ಲಿಸಲಾಗಿದೆ.
- ಐಟಿಎಸ್ ಮತ್ತು ಪಾದಚಾರಿ ಮೇಲ್ಸೇತುವೆಗಳಿಗಾಗಿ (ಎಫ್‌ಒಬಿ) ಟೆಂಡರುಗಳನ್ನು ಆಹ್ವಾನಿಸಲಾಗಿದೆ.
- **ಭೂ ಸ್ವಾಧೀನ:**62 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದೆ.ಜಂಟಿ ಅಳತೆ ಪ್ರಮಾಣಪತ್ರ ಸರ್ವೆಯನ್ನು (ನವಲೂರು ಹೊರತುಪಡಿಸಿ) ಪೂರ್ಣಗೊಳಿಸಲಾಗಿದೆ. ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಗೆ ಸಂಬಂಧಿಸಿದಂತೆ ಪರಿಹಾರದ ಮೊತ್ತವನ್ನು ಆರು ಗ್ರಾಮಗಳಿಗಾಗಿ ಸರ್ಕಾರವು ಅನುಮೋದಿಸಿದೆ. ಸಮ್ಮತಿ ನೀಡಿಕೆ ಒಪ್ಪಂದ ಪ್ರಕ್ರಿಯೆ ಪ್ರಗತಿಯಲ್ಲಿದೆ. ಡಿಸೆಂಬರ್ 2014 ರವರೆಗೂ ಮೂವತ್ನಾಲು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

8. **<u>ಬೆಂಗಳೂರು ನಗರಕ್ಕೆ ತ್ವರಿತ ಬಸ್ ಸಂಚಾರ ವ್ಯವಸ್ಥೆ (ಬಿ.ಆರ್.ಟಿ.ಎಸ್):</u>**

ಸಮಗ್ರ ಸಂಚಾರ ಮತ್ತು ಸಾರಿಗೆ ಯೋಜನೆಯಲ್ಲಿ (ಸಿಟಿಟಿಪಿ) ಬೆಂಗಳೂರು ನಗರಕ್ಕೆ 3914.4 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 12 ಕಾರಿಡಾರುಗಳ ಉದ್ದಕ್ಕೂ 279.6ಕಿ.ಮೀ.ಗಳ ಒಟ್ಟು ಉದ್ದದ ತ್ವರಿತ ಬಸ್ ಸಂಚಾರ ವ್ಯವಸ್ಥೆಯನ್ನು (ಬಿಆರ್‌ಟಿಎಸ್) ರೂಪಿಸಲು ಶಿಫಾರಸು ಮಾಡಲಾಗಿದೆ. ನಗರ ಭೂ ಸಾರಿಗೆ ನಿರ್ದೇಶನಾಲಯವು, ಮೊದಲ ಹಂತದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳ ಮೇಲ್ಸೇತುವೆವರೆಗಿನ 30 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯ ಪೂರ್ವ ಭಾಗದ ಉದ್ದಕ್ಕೂ ತ್ವರಿತ ಬಸ್ ಸಂಚಾರ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಸವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿದೆ. ಈ ಯೋಜನೆಯ ಅಂದಾಜು ವೆಚ್ಚ ಸುಮಾರು 1025 ಕೋಟಿ ರೂ.ಗಳು ಮತ್ತು ಈ ಯೋಜನೆಯು, 30,000ಪಿಪಿಹೆಚ್‌ಪಿಡಿ ಗರಿಷ್ಠ ವಿನ್ಯಾಸ ಸಾಮರ್ಥ್ಯವನ್ನು ಹೊಂದಿರುವ ಪ್ರತ್ಯೇಕ ಪಥವಿರುವ ವ್ಯವಸ್ಥೆಯಾಗಿದೆ (closed system). ಈ ವ್ಯವಸ್ಥೆಯು, ಎರಡು ಟರ್ಮಿನಲ್‌ಗಳನ್ನು ಒಳಗೊಂಡಂತೆ, ಸುಮಾರು 700 ರಿಂದ 800 ಮೀಟರುಗಳ ಅಂತರದಲ್ಲಿ ಕಾರಿಡಾರ್ ಸ್ಥಳದ ಉದ್ದಕ್ಕೂ 39 ನಿಲ್ದಾಣಗಳನ್ನು ಒಳಗೊಂಡಿದೆ. ಈ ವ್ಯವಸ್ಥೆಯು ಒಂದು ಪ್ರತ್ಯೇಕ ಕಾರಿಡಾರನ್ನು ಹೊಂದಿದ್ದು, ಇದರಲ್ಲಿ ನಗರ ಪರಿಸರಕ್ಕಾಗಿ ವಿನ್ಯಾಸಗೊಳಿಸಿದ ಹೊಸ ತಂತ್ರಜ್ಞಾನದ ಬಸ್ಸುಗಳ ಸಂಚಾರವಿರುತ್ತದೆ. ಬಸ್ ಹತ್ತುವ ಮೊದಲೇ ಟಿಕೆಟ್ ಪಡೆಯುವ ವ್ಯವಸ್ಥೆ ಮತ್ತು ಇಂಟಲಿಜೆಂಟ್ ಸಾರಿಗೆ ವ್ಯವಸ್ಥೆ (ಐಟಿಎಸ್) ಇವು ಈ ವ್ಯವಸ್ಥೆಯಲ್ಲಿ ಇರುವ ಇತರ ಅಂಶಗಳಾಗಿದೆ. ಐಟಿಎಸ್ ವಿಧಾನದ ಬಳಕೆಯು ಸಾರಿಗೆ ವ್ಯವಸ್ಥೆಯನ್ನು ದಕ್ಷವಾಗಿ ನಿರ್ವಹಿಸಲು ಮತ್ತು ಪ್ರಯಾಣಿಕರ ಅನುಕೂಲವನ್ನು ಗಣನೀಯವಾಗಿ ಸುಧಾರಿಸಲು ಅವಕಾಶ ಮಾಡಿಕೊಡುತ್ತದೆ. ಬೆಂಗಳೂರು ನಗರಕ್ಕೆ, ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಬಳಕೆದಾರರ ಪ್ರಯಾಣದ ಅವಧಿಯನ್ನು ತಗ್ಗಿಸುವ ಇಂಥ ಒಂದು ವ್ಯವಸ್ಥೆಯ ಅವಶ್ಯಕತೆ ಇದೆ. ಬೆಂಗಳೂರು ಬಿಆರ್‌ಟಿಎಸ್‌ನ ಕೆಲವು ಮುಖ್ಯ ಲಕ್ಷಣಗಳು ಈ ಮುಂದಿನ ಅಂಶಗಳನ್ನು ಒಳಗೊಂಡಿದೆ.

- ಕೇಂದ್ರ/ ಮಧ್ಯ ಭಾಗದಲ್ಲಿ ಬಸ್ ಮಾರ್ಗಗಳಿರುವ ಪ್ರತ್ಯೇಕ ಬಿಆರ್‌ಟಿ ವ್ಯವಸ್ಥೆ.
- ಸಮತಟ್ಟಾದ ಕಟ್ಟೆಯಿರುವ ಮೆಟ್ಟಿಲುಗಳು ಮತ್ತು ಬಸ್‌ನ ಹೊರಗಡೆಯಲ್ಲಿ ಟಿಕೆಟ್ ನೀಡಿಕೆ ವ್ಯವಸ್ಥೆಯೊಂದಿಗೆ ಮಧ್ಯೆ ಮಧ್ಯೆ ಬಸ್ ನಿಲ್ದಾಣಗಳು
- ಪ್ರಧಾನ ಮತ್ತು ಸಂಪರ್ಕ ಸಾರಿಗೆ ಸೇವೆಗಳನ್ನು ಸಂಯೋಜನೆಗೊಳಿಸುವುದು
- ಸಿಗ್ನಲ್ ವ್ಯವಸ್ಥೆಯನ್ನು ಸಮನ್ವಯಗೊಳಿಸುವುದರೊಂದಿಗೆ ಬಿಆರ್‌ಟಿಎಸ್ ಬಸ್‌ಗಳಿಗೆ ಆದ್ಯತೆ ನೀಡುವುದು.

- ಬಸ್ ಮಾರ್ಗಗಳು ಮತ್ತು ಮಿಶ್ರ ಸಂಚಾರ ಮಾರ್ಗಗಳನ್ನು ಭೌತಿಕವಾಗಿ ವಿಭಜನೆ ಮಾಡುವುದು
- ಬೇಡಿಕೆ ಇರುವ ಸ್ಥಳಗಳಲ್ಲಿ ಬಸ್ ನಿಲ್ದಾಣಗಳನ್ನು ಒದಗಿಸುವುದು.
- ಒಂದೇ ಮಟ್ಟದ/ ಸಿಗ್ನಲ್ ವ್ಯವಸ್ಥೆಯುಳ್ಳ ಕ್ರಾಸಿಂಗ್‌ಗಳು/ ಪಾದಚಾರಿ ಮೇಲ್ಸೇತುವೆಗಳ ಮುಖಾಂತರ ಪಾದಚಾರಿಗಳಿಗೆ ರಸ್ತೆ ದಾಟಲು ಸೌಲಭ್ಯಗಳನ್ನು ಒದಗಿಸುವುದು.
- ಈಗಿರುವ ಸರ್ವಿಸ್ ರಸ್ತೆಗಳನ್ನು ಹಾಗೆಯೇ ಉಳಿಸಿಕೊಳ್ಳುವುದು.
- ಅಸ್ತಿತ್ವದಲ್ಲಿರುವ ಮೂಲಸೌಕರ್ಯ ಯೋಜನೆಗಳನ್ನು, ಎಂದರೆ – ಮೇಲ್ಸೇತುವೆಗಳು, ಅಂಡರ್ ಪಾಸ್‌ಗಳು, ಮುಂತಾದವುಗಳನ್ನು ಸಂಯೋಜಿಸುವುದು.
- ಆರ್‌ಒಡಬ್ಲ್ಯುನ ಯಾವುದೇ ಭಾಗದಲ್ಲಿ ರಸ್ತೆ ಮೇಲೆ ವಾಹನ ನಿಲುಗಡೆ ಅಪೇಕ್ಷಣೀಯವಾಗಿರುವುದಿಲ್ಲ.

ಬೆಂಗಳೂರು ನಗರ ತ್ವರಿತ ಬಸ್ ಸಂಚಾರ ವ್ಯವಸ್ಥೆಯನ್ನು ಬಿಎಂಟಿಸಿ ಮೂಲಕ ಅನುಷ್ಠಾನಗೊಳಿಸಲು ಮತ್ತು ನಿರ್ವಹಿಸಲು ಉದ್ದೇಶಿಸಲಾಗಿದೆ.

9. **ಬೆಂಗಳೂರಿಗಾಗಿ ಉಪ-ನಗರ ರೈಲು ವ್ಯವಸ್ಥೆ:**

ಸಿಟಿಟಿಪಿಯು ಬೆಂಗಳೂರು ನಗರದ ಸುತ್ತಮುತ್ತಲಿನ ಪಟ್ಟಣಗಳಾದ ರಾಮನಗರ, ಚೆನ್ನಪಟ್ಟಣ, ತುಮಕೂರು ಮತ್ತು ದೊಡ್ಡಬಳ್ಳಾಪುರ ಮುಂತಾದವುಗಳನ್ನು ಉಪನಗರ ರೈಲು ವ್ಯವಸ್ಥೆಗೆ ಜೋಡಿಸುವ ಬಗ್ಗೆ ಶಿಫಾರಸು ಮಾಡಿದೆ. ರಾಜ್ಯ ಸರ್ಕಾರವು ಸ್ವಯಂಪ್ರೇರಿತವಾಗಿ ಈಗಿರುವ ಉಪನಗರ ರೈಲು ಸಂಚಾರದ ಬಗ್ಗೆ ವಿವರವಾದ ವಿಶ್ಲೇಷಣೆ ನಡೆಸಿ, ಅದರ ಭವಿಷ್ಯದ ಬೇಡಿಕೆಯ ಸಾಮರ್ಥ್ಯ; ಈಗಿರುವ ಮೂಲಸೌಕರ್ಯದಲ್ಲಿನ ಕೊರತೆಗಳನ್ನು ಗುರುತಿಸುವುದು, ವ್ಯವಸ್ಥೆಯಲ್ಲಿ ಅಡೆತಡೆಗಳೇನಾದರೂ ಇದ್ದರೆ, ಅಂತಹ ಅಡೆತಡೆಗಳು ಮತ್ತು ಉಪನಗರ ರೈಲು ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ನಿಲ್ದಾಣಗಳು ಮತ್ತು ಮಾರ್ಗಗಳಲ್ಲಿ ಮೂಲಸೌಕರ್ಯದ ಅಗತ್ಯತೆಗಳು – ಈ ಎಲ್ಲವುಗಳ ಬಗ್ಗೆ ಅಧ್ಯಯನ ನಡೆಸಲು ಮೆ॥ ರೈಟ್ಸ್ ಸಂಸ್ಥೆಯನ್ನು ನಿಯೋಜಿಸಿದೆ. ಅಧ್ಯಯನದ ಅಂತಿಮ ವರದಿಯನ್ನು ಸ್ವೀಕರಿಸಿ ಸಂಬಂಧಪಟ್ಟ ಸ್ಟೇಕ್ ಹೋಲ್ಡರ್ಸ್‌ಗೆ ಕಳುಹಿಸಲಾಗಿದೆ.ಈ ಅಧ್ಯಯನವು ಉಪನಗರದ ಪ್ರಮುಖ ರೈಲು ಮಾರ್ಗಗಳನ್ನು ಪರಿಶೀಲಿಸಿದ್ದು, ಬೈಯಪ್ಪನಹಳ್ಳಿ – ಹೊಸೂರು ವಿಭಾಗ, ಯಶವಂತಪುರ– ತುಮಕೂರು ವಿಭಾಗ, ಬೆಂಗಳೂರು–ಮಂಡ್ಯ ವಿಭಾಗ ಮತ್ತು ಯಲಹಂಕ ಚಿಕ್ಕಬಳ್ಳಾಪುರ ವಿಭಾಗಗಳಿಗೆ ಸೇವೆಗಳನ್ನು ವಿಸ್ತರಿಸಬೇಕೆಂದು ಮೂಲಭೂತ ಸೌಕರ್ಯಾಭಿವೃದ್ಧಿ ಇಲಾಖೆ, ನೈಋತ್ಯ ರೈಲ್ವೆ ಮುಂತಾದ ಇಲಾಖೆಗಳು ಶಿಫಾರಸು ಮಾಡಿವೆ. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ 8759 ಕೋಟಿ ರೂ.ಗಳು. ಈ ಯೋಜನೆಯ "ಹಂತ 1ಎ" ಅನುಷ್ಠಾನಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಪ್ರಸ್ತುತ ಸಿದ್ಧಪಡಿಸುತ್ತಲಿದ್ದು ಇದರ ಒಟ್ಟು ವೆಚ್ಚ ಸುಮಾರು 1500 ಕೋಟಿ ರೂ.ಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಬೆಂಗಳೂರು ನಗರ ರೈಲು ನಿಲ್ದಾಣವು ಬೆಂಗಳೂರು ನಗರದ ಮುಖ್ಯ ಕೇಂದ್ರವಾಗಿದೆ. ಆದಾಗ್ಯೂ, ಈ ರೈಲು ನಿಲ್ದಾಣವು ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಒಂದೇ ಒಂದು ರೈಲಿನ ದೀರ್ಘ ವಿಳಂಬವನ್ನೂ ಸಹ

ಪರಿಣಾಮಕಾರಿಯಾಗಿ ನಿವಾರಿಸಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ, ಬೆಂಗಳೂರು ರೈಲು ನಿಲ್ದಾಣದ ಪ್ರಾಂಗಣದಲ್ಲಿ ಒಟ್ಟು 10 ಪ್ಲಾಟ್‌ಫಾರಂ ಮಾರ್ಗಗಳು. 6 ಪಿಟ್ ಲೈನ್‌ಗಳು (ನಿರ್ವಹಣೆ ಮಾರ್ಗಗಳು), 8 ಸ್ಟೇಬ್ಲಿಂಗ್ ಮಾರ್ಗಗಳು ಹಾಗೂ ಕೆಲವು ಇತರ ಮಾರ್ಗಗಳು ಇವೆ.

ಆದುದರಿಂದ, ಈಗಿರುವ ಅಡೆತಡೆಗಳನ್ನು ನಿವಾರಿಸಲು ಬೆಂಗಳೂರು ರೈಲು ನಿಲ್ದಾಣವನ್ನು ಪುನರ್ ಅಭಿವೃದ್ಧಿಪಡಿಸುವುದು ಅಗತ್ಯವಿದೆ. ಹಾಗೆಯೇ, ಯಶವಂತಪುರ ನಿಲ್ದಾಣದ ಈಗಿರುವ ನ್ಯೂನತೆಗಳನ್ನು ಸರಿಪಡಿಸಿ ನಿಲ್ದಾಣದಲ್ಲಿರುವ ಅನುಕೂಲತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಗುವಂತೆ ನೋಡಿಕೊಳ್ಳಬೇಕಾಗಿದೆ. "ಹಂತ 1ಎ"ರಲ್ಲಿ ಎಂಇಎಂಯು ರೇಕ್ (ಒಇಒಗ ಡಿಚಿಞಬ) ಗಳನ್ನು ಖರೀದಿಸುವುದು, ಸ್ವಯಂಚಾಲಿತ ಸಿಗ್ನಲ್‌ಗಳನ್ನು ಅಳವಡಿಸುವುದು, ಹೆಚ್ಚುವರಿ ಪಿಟ್‌ಲೈನ್‌ಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಬೆಂಗಳೂರು ನಗರ ರೈಲು ನಿಲ್ದಾಣದಲ್ಲಿ ಮಾಡುವಂತೆ ಪ್ರಸ್ತಾಪಿಸಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು "ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ" ಎಂಬ ವಿಶೇಷ ಉದ್ದೇಶದ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

10. ನಗರ ಭೂ ಸಾರಿಗೆ ನಿರ್ದೇಶನಾಲಯವು, ಜಪಾನ್ ಅಂತರ ರಾಷ್ಟ್ರೀಯ ಸಹಕಾರ ಏಜೆನ್ಸಿ (ಎಐಅಂ) ಯ ನೆರವಿನೊಂದಿಗೆ, ಬೆಂಗಳೂರು ಮತ್ತು ಮೈಸೂರು ನಗರಗಳಿಗಾಗಿ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯ ಮೇಲು ಯೋಜನೆಯೊಂದನ್ನು (ಮಾಸ್ಟರ್ ಪ್ಲಾನ್) ಸಿದ್ಧಪಡಿಸುತ್ತಿದೆ. ಬೆಂಗಳೂರು ಮತ್ತು ಮೈಸೂರು ನಗರಗಳಿಗಾಗಿ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯ ಮೇಲು ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿ ಹಿತಾಸಕ್ತಿದಾರರ ಕಾರ್ಯಕಾರಿ ತಂಡವೊಂದನ್ನು ರಚಿಸಲಾಗಿದೆ. ಈ ಬೆಂಗಳೂರು ಮತ್ತು ಮೈಸೂರು ನಗರಗಳ ವಾಹನ ಸಂಚಾರ ಮತ್ತು ಸಾರಿಗೆ ಕಾರ್ಯನಿರ್ವಹಣೆಯನ್ನು ಸುಧಾರಿಸುವುದಕ್ಕಾಗಿ ಸದೃಢವಾದ, ಸುಸಂಘಟಿತವಾದ ಮತ್ತು ಸಮಗ್ರವಾದ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ಈ ನಗರಗಳಲ್ಲಿರುವ ಹಿತಾಸಕ್ತಿದಾರರನ್ನು ಒಳಗೊಳ್ಳುವ ಮೂಲಕ ತಂತ್ರಜ್ಞಾನ ಆಧರಿತ ಪರಿಹಾರಗಳನ್ನು ಬಳಸಿಕೊಳ್ಳುವ ಮೂಲಕ ಒಂದು ಕಾರ್ಯ ಚೌಕಟ್ಟನ್ನು ರೂಪಿಸುವುದು ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯ ಮೇಲು ಯೋಜನೆಯ ಉದ್ದೇಶವಾಗಿದೆ. ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯ ಮೇಲು ಯೋಜನೆಯ ಮುಖ್ಯ ಘಟಕಾಂಶಗಳು ಇಂತಿವೆ:

- ನಗರಗಳಿಗೆ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆ ಕಲ್ಪಿಸುವುದು (ಬೆಂಗಳೂರು ಮತ್ತು ಮೈಸೂರು ಎರಡೂ ನಗರಗಳಿಗೆ)
- ಹೊರವಲಯದ ವರ್ತುಲ ರಸ್ತೆ ಯೋಜನೆಗೆ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆ ಕಲ್ಪಿಸುವುದು (ಹೆದ್ದಾರಿ ವಾಹನ ಸಂಚಾರ ನಿರ್ವಹಣಾ ವ್ಯವಸ್ಥೆ ಮತ್ತು ಶುಲ್ಕ ನಿರ್ವಹಣಾ ವ್ಯವಸ್ಥೆ)
- ವಾಹನ ದಟ್ಟಣೆ ಶುಲ್ಕ ವ್ಯವಸ್ಥೆ ಕಲ್ಪಿಸುವುದು (ಬೆಂಗಳೂರಿಗೆ ಮಾತ್ರ)
- ಸಾಮಾನ್ಯ ಸಂಚಾರ ಕಾರ್ಡು (ಕಾಮನ್ ಮೊಬಿಲಿಟಿ ಕಾರ್ಡ್) ಅನುಮತಿ ನೀಡಿಕೆ ಕೇಂದ್ರ (ಕ್ಲಿಯರ್ ಹೌಸ್) (ರಾಜ್ಯ ಮಟ್ಟ) ಕಲ್ಪಿಸುವುದು

ಬೆಂಗಳೂರು ನಗರದ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಗಳ ಮೇಲು ಯೋಜನೆಯು ಮುಕ್ತಾಯದ ಹಂತದಲ್ಲಿದೆ ಮತ್ತು ಮೈಸೂರು ನಗರದ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯ ಮೇಲು ಯೋಜನೆಯು ಪ್ರಗತಿಯಲ್ಲಿದೆ.

**x.** **ಇಲಾಖೆಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು:** ನಗರ ಭೂ ಸಾರಿಗೆ ನಿರ್ದೇಶನಾಲಯವು **www.urbantransport.kar.gov.in**, **www.bmlta.org** ವೆಬ್ ಸೈಟ್ ಗಳಲ್ಲಿ ನಿರ್ದೇಶನಾಲಯದ ವಿಷಯಗಳನ್ನು ಆಗಿಂದ್ದಾಗೆ ಅಳವಡಿಸಲಾಗುವುದು/ಪರಿಷ್ಕರಿಸಲಾಗುವುದು.

**xi.** **ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು, ಪದನಾಮಗಳು ಮತ್ತು ಇತರೆ ವಿವರಗಳು**

| ಕ್ರ ಸಂ | ಇಲಾಖೆಗಳ ಹೆಸರು | ಮಾಹಿತಿ ಹಕ್ಕು ಕಾಯ್ದೆ 2005 ರ ಸೆಕ್ಷನ್ 5 (1)ರ ಪ್ರಕಾರ ಸಾರ್ಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಹಕ್ಕು ಕಾಯ್ದೆ 2005 ರ ಸೆಕ್ಷನ್ 5 (2)ರ ಪ್ರಕಾರ ಸಹಾಯಕ ಸಾರ್ಜನಿಕಮಾಹಿತಿ ಅಧಿಕಾರಿ | ಮಾಹಿತಿ ಹಕ್ಕು ಕಾಯ್ದೆ 2005 ರ ಸೆಕ್ಷನ್ 19 (1) ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1. | ಆಡಳಿತ ವಿಭಾಗ, ನಗರ ಭೂ ಸಾರಿಗೆ ನಿರ್ದೇಶನಾಲಯ | ಶ್ರೀ ದಯಾನಂದ ಶೆಟ್ಟಿ, ಜಂಟಿ ನಿರ್ದೇಶಕರು | ಆರ್ ನಾಗರಾಜ್ ಆಡಳಿತಾಧಿಕಾರಿ | ಮಂಜುಲ ವಿ ಭಾ.ಆ.ಸೇ ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ |
| 2. | ತಾಂತ್ರಿಕ ವಿಭಾಗ ನಗರ ಭೂ ಸಾರಿಗೆ ನಿರ್ದೇಶನಾಲಯ | ಸುಮತಿ.ಆರ್ ವಿಶೇಷಾಧಿಕಾರಿ | ಶ್ರೀಮತಿ ವೀಣಾ.ಸಿ.ನಿರ್ವಾಣಿ ಸಹಾಯಕ ನಿರ್ದೇಶಕರು | |

ನಗರ ಭೂ ಸಾರಿಗೆ ನಿರ್ದೇಶನಾಲಯವು ಮಾಹಿತಿಗಳನ್ನು ಜನವರಿ 2014 ರವರೆಗೆ ಪರಿಷ್ಕೃತಗೊಳಿಸಿದೆ. ಇತರೆ ಮಾಹಿತಿಗಳನ್ನು ನಂತರ ನಿಗದಿಗೊಳಿಸಿದಲ್ಲಿ ಅದನ್ನು ಕಾಲಕಾಲಕ್ಕೆ ಅಳವಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/-
ಆಯುಕ್ತರು
ನಗರ ಭೂ ಸಾರಿಗೆ
& ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ